“ಸರ್, ಇದು ಮೇಲು ನೋಟಕ್ಕೆ ರಾಬರಿ ಕೇಸ್. ಆದರೆ ಅದನ್ನು ಮಾಡುವ ಮೊದಲು, ಈ ವ್ಯಕ್ತಿಯನ್ನು ಮರ್ಡರ್ ಮಾಡಿದ್ದಾರೆ. ಸತ್ತಿರುವ ವ್ಯಕ್ತಿ, ಇವರ ಮನೆಯಲ್ಲಿ ಅಡುಗೆ ಕೆಲಸ ಮಾಡುವವನು. ಕಳ್ಳತನ ಮಾಡುವ ಉದ್ದೇಶದಿಂದ ಒಳನುಗ್ಗಿದಾಗ ಈ ವ್ಯಕ್ತಿ ತಡೆದಿರಬೇಕು. ಹಾಗಾಗಿ ಅವನನ್ನು ಚುಚ್ಚಿ ಸಾಯಿಸಿ, ಮನೆಯವರನ್ನು ರೂಂನಲ್ಲಿ ಕೂಡಿಹಾಕಿ ಎಲ್ಲ ವಸ್ತುಗಳನ್ನೂ ಕದ್ದೊಯ್ದಿದ್ದಾರೆ.”

ಎ.ಸಿ.ಪಿ. ಧನಂಜಯನಿಗೆ ವರದಿ ಒಪ್ಪಿಸಿದ ಇನ್‌ಸ್ಪೆಕ್ಟರ್ ರವಿ.

ಧನಂಜಯ ಹೊಸಿಲ ಮೇಲೆ ಬಿದ್ದಿದ್ದ ಶವದ ಕಡೆ ನೋಡಿದ. ಶವದ ಅರ್ಧ ಭಾಗ ಹೊಸಿಲ ಒಳಗಡೆ, ಇನ್ನರ್ಧ ಹೊಸಿಲ ಹೊರಗಡೆ ಬಿದ್ದಿತ್ತು. ಹೊಟ್ಟೆಯ ಭಾಗದಲ್ಲಿ ಗಾಯಗಳಾಗಿ ವಿಪರೀತ ರಕ್ತಸ್ರಾವವಾಗಿ ಸತ್ತಿದ್ದ. ಸಾಯುವ ಮೊದಲು ಬಹಳ ನರಳಿರಬೇಕೆನೋ, ಕೈಕಾಲು ಆಡಿಸುವಾಗ ಹರಿದುಬಂದ ರಕ್ತ ಅಲ್ಲಲ್ಲಿ ಒರೆಸಿಕೊಂಡು ಇಡೀ ದೃಶ್ಯವನ್ನು ಭಯಾನಕವಾಗಿ ಮಾಡಿತ್ತು. ತನ್ನ ಸರ್ವಿಸ್‌ನಲ್ಲಿ ಅನೇಕ ಕ್ರೈಂ ಸೀನ್‌ಗಳನ್ನು ನೋಡಿದ್ದ ಧನಂಜನಯನಿಗೆ ಕೂಡಾ ಆ ದೃಶ್ಯ ನೋಡಿ ಒಮ್ಮೆ ಭಯವಾಯಿತು.

“ಶವವನ್ನು ತಿರುಗಿಸಿ ಹಾಕಿ, ಮುಂದಿನ ಕೆಲಸ ಮಾಡಿ” ಎನ್ನುತ್ತಾ ಆ ಮನೆಯೊಳಗಡಿಯಿಟ್ಟ. ಅದೊಂದು ಮೇಲ್ಮಧ್ಯಮವರ್ಗದವರ ಮನೆ. ಇಡೀ ಮನೆಯ ತುಂಬೆಲ್ಲಾ ಅಲಂಕಾರದ ಸಾಮಗ್ರಿಗಳು, ಎಲ್ಲವನ್ನೂ ಒಪ್ಪವಾಗಿ ಜೋಡಿಸಿದ್ದರು. ಅದರ ಮೇಲೆ ಒಂದು ಚೂರು ಕೂಡಾ ದೂಳು ಕೂರದಂತೆ ನೋಡಿಕೊಂಡಿದ್ದರು. ಒಟ್ಟಾರೆ ನೋಡಿದರೆ, ಯಾರೋ ಸೂಕ್ಷ್ಮ ಮನಸ್ಸಿನವರು ಆಸೆಪಟ್ಟು ಅಲಂಕರಿಸಿದ ಮನೆಯಂತಿತ್ತು.

ಮೂಲೆಯಲ್ಲಿದ್ದ ಸೋಫಾದಲ್ಲಿ ಸುಮಾರು ಐವತ್ತರ ಆಸುಪಾಸಿನ ದಂಪತಿ ಕಲ್ಲಿನಂತೆ ಕುಳಿತಿದ್ದರು. ಅಕ್ಕ ಪಕ್ಕದ ಮನೆಯವರು ಅವರ ಪಕ್ಕದಲ್ಲಿ ಕುಳಿತು ಧೈರ್ಯ ತುಂಬುವ ಮಾತುಗಳಾಡುತ್ತಿದ್ದರು.

“ಹಲೋ ನಾನು ಎ.ಸಿ.ಪಿ. ಧನಂಜಯ” ಎನ್ನುತ್ತಾ ಕೈ ಚಾಚಿದ. ಅವರಿಬ್ಬರೂ ಮಾತಾಡಲಿಲ್ಲ. ಅವರ ಪರಿಸ್ಥಿತಿ ಅರಿತ ಧನಂಜಯ,

“ರಾಬರಿ ಆಗಿರುವುದು ಎಲ್ಲಿ?”

ಪಕ್ಕದಲ್ಲಿ ಕುಳಿತಿದ್ದವ ಮೆಟ್ಟಿಲ ಕಡೆ ಕೈ ತೋರಿಸಿದ.

ಮೆಟ್ಟಿಲೇರುತ್ತಿದ್ದಂತೆಯೇ ಎಡ ಭಾಗದಲ್ಲೊಂದು ರೂಂ. ಅದರ ಬಾಗಿಲು ಪೂರ್ತಿ ತೆರೆದಿತ್ತು. ಒಳಗಡೆ ಎಲ್ಲಾ ವಸ್ತುಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಮೂಲೆಯಲ್ಲಿದ್ದ ಒಂದು ಕಬ್ಬಿಣದ ಬೀರುವಿನ ಬಾಗಿಲು ತೆರೆದಿತ್ತು. ಅದರೊಳಗಿನ ಎಲ್ಲಾ ವಸ್ತುಗಳನ್ನೂ ಚೆಲ್ಲಾಪಿಲ್ಲಿಯಾಗಿ ಹರಡಿದ್ದರು... ಉಳಿದ ಯಾವ ವಾರ್ಡ್‌ರೋಬ್‌ಗಳನ್ನು ಮುಟ್ಟಿರಲಿಲ್ಲ.

“ಸರ್ ನೋಡಿದರೆ, ರಾಬರಿ ಮಾಡಕ್ಕೆ ಬಂದವರಿಗೆ ತಮಗೆ ಏನು ಬೇಕು, ಅದು ಎಲ್ಲಿದೆ ಎಂಬುದರ ಬಗ್ಗೆ ಅರಿವಿರಬೇಕು. ಅದಕ್ಕೇ ಒಂದೇ ಬೀರು ತೆರೆದು ಅಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಎತ್ತೊಯ್ದಿದ್ದಾರೆ.”

ಧನಂಜಯನನ್ನು ನೋಡಿ ಎವಿಡೆನ್ಸ್ ಕಲೆಕ್ಟ್ ಮಾಡುತ್ತಿದ್ದ ಫೋರೆನ್ಸಿಕ್‌ನವನು ಹೇಳಿದ.

“ಶ್ವಾನ ದಳ ತರಿಸಿದರೆ ಉಪಯೋಗವಾಗುತ್ತಾ?”

“ಇಲ್ಲ ಸಾರ್, ಸುಮಾರು ಹತ್ತು ಹದಿನೈದು ಬೇರೆ ಬೇರೆ ಸುಗಂಧ ದ್ರವ್ಯ ಹರಡಿ ಹೋಗಿದ್ದಾರೆ.”

ಬಾಗಿಲಬಳಿ ಯಾರೋ ಬಂದಂತೆ ಭಾಸವಾಗಿ ತಿರುಗಿ ನೋಡಿದ. ಕಾನ್‌ಸ್ಟೆಬಲ್ ಮನೆಯ ಮಾಲೀಕನನ್ನು ಕರೆತಂದಿದ್ದ.

“ಏನೇನು ಕಳ್ಳತನ ಆಗಿದೆ ಅಂತ ನೋಡಿ ಹೇಳಿ ಅಂದರು; ಅದಕ್ಕೇ ಬಂದೆ” ಎಂದ ಮನೆಯವ.